## ಮಧ್ಯರಾತ್ರಿಯ ಮೆಸೇಜ್!

ಹೆಂಡತಿಯ ಗೊರಕೆಯಿಂದ ಮಧ್ಯರಾತ್ರಿಯಾದರೂ ನಿದ್ರೆ ಬರದೆ ಬೇಸತ್ತಿದ್ದ ಗುಂಡ ಅವಳ ಮೊಬೈಲ್‌ಗೆ ಬಂದ ಮೆಸೇಜ್ ನೋಡಿ ಗಾಬರಿಯಾದ! ಯಾರು ನನ್ನ ಹೆಂಡತಿಗೆ ಈ ಹೊತ್ತಿನಲ್ಲಿ BEAUTIFUL ಅಂತ ಮೆಸೇಜ್ ಕಳಿಸಿದ್ದು ಎಂಬ ಗೊಂದಲದಲ್ಲಿ ಹೆಂಡತಿಯನ್ನು ಎಬ್ಬಿಸಿ, 'ಯಾರೇ ಅದು? ಈ ಹೊತ್ತಿನಲ್ಲಿ ಯಾವನೋ ಒಬ್ಬ ನಿನಗೆ ಹೀಗೆಲ್ಲಾ ಮೆಸೇಜ್ ಕಳಿಸಿದ್ದಾನೆ?' ಎಂದು ಕೂಗಾಡಿದ. ಅವನ ಹೆಂಡತಿ ಅದನ್ನು ನೋಡಿ, 'ರೀ, ಎಷ್ಟು ಸರ್ತಿ ಹೇಳಿದ್ದೀನಿ ನಿಮಗೆ? ಕನ್ನಡಕ ಇಲ್ಲದೇ ಫೋನು ಮುಟ್ಟಬೇಡಿ ಅಂತ... ಇದು BATTERY FULL ಅಂತ ಬಂದಿರೋದು' ಎಂದು ಅವನ ತಲೆಗೆ ಮೊಟಕಿದಳು.

**ವಿ. ವಿಜಯೇಂದ್ರ ರಾವ್**





## ಒಗಟು

ರಮೇಶ ಮತ್ತು ರಾಜೇಶ ಸ್ನೇಹಿತರು. ಸಮಯ ಸಿಕ್ಕಾಗಲೆಲ್ಲಾ ಒಬ್ಬರು ಒಗಟು ಕೇಳೋದು, ಇನ್ನೊಬ್ಬರು ಉತ್ತರ ಹೇಳೋದು ಅವರ ನೆಚ್ಚಿನ ಟೈಂ ಪಾಸ್. ಅಂದು ಸಂಜೆ ವಾಕಿಂಗ್ ಮುಗಿಸಿ ಇಬ್ಬರೂ ಕಲ್ಲುಬೆಂಚಿನ ಮೇಲೆ ಕುಳಿತಿದ್ದಾಗ ರಮೇಶ ಕೇಳಿದ, 'ಡಾಕ್ಟರ್‌ಗಳು ಆಪರೇಷನ್ ಮಾಡೋದಕ್ಕಿಂತ ಮುಂಚೆ ರೋಗಿಗಳ ಪ್ರಜ್ಞೆ ತಪ್ಪಿಸುತ್ತಾರಲ್ಲಾ ಯಾಕೆ?' ರಾಜೇಶ ಹೇಳಿದ, 'ಅಯ್ಯೊ, ಅಷ್ಟೂ ಗೊತ್ತಿಲ್ವೇನೋ ನಿನಗೆ. ಆಪರೇಷನ್ ಮಾಡೋದನ್ನ ರೋಗಿಗಳು ಕಲಿತು ಬಿಟ್ಟರೆ ಡಾಕ್ಟರ್ ಕೆಲಸ ಹೋಗಲ್ವಾ ಮತ್ತೆ?'

**ಕಾವ್ಯಾ ಶಿವಾನಂದ**

ಕಲೆ: ಗಣೇಶ ಆಚಾರ್ಯ